**ದಿನಾಂಕಃ24-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಜಿ ಎಸ್., 1 ರಿಂದ 6 ನೇ ಪ್ರತಿವಾದಿಗಳ ಪರ ವಕೀಲರಿಂದ**

34. ಸರ್ವೇ ನಂ.63 ರ ವಿಸ್ತೀರ್ಣ 40 ಎಕರೆ 6 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಈ ದಾವೆಯನ್ನು ಹೂಡಲಾಗಿದೆ. ದಾವಾ ಷೆಡ್ಯೂಲ್ ಸ್ವತ್ತು ನಮ್ಮ ಹಾಗೂ ಪ್ರತಿವಾದಿಯರನ್ನು ಒಳಗೊಂಡ ಮೂಲಪುರುಷನಾದ ಗಂಗನ ಕುಟುಂಬಕ್ಕೆ ಸೇರಿತ್ತು ಎಂದು ಸಾಬಿತುಪಡಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಯರ ಮೂಲಪುರುಷ ಗಂಗ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತು ಮೂಲತಃ ಸದರಿ ಗಂಗರವರ ಹೆಸರಿನಲ್ಲಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತು ಮೂಲವಾಗಿ ತಿಪ್ಪಗ ಬಿನ್ ಗಂಗಯ್ಯನವರ ಹೆಸರಿಗೆ ಇದ್ದು, ಅವರ ಪೌತಿಯ ನಂತರ ಪರಸಪ್ಪ, ತಿಮ್ಮಯ್ಯ, ಯಲ್ಲಪ್ಪ ಹಾಗೂ ರಾಮಚಂದ್ರಪ್ಪರವರ ಹೆಸರಿಗೆ ಯಾವ ದಾಖಲೆಗಳ ಮುಖಾಂತರ ಖಾತೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಈ ಮೇಲೆ ಹೇಳಿದ ವಾಕ್ಯದಂತೆ ಅಂಶವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಲಾಗಿದೆ. ಗಂಗನ ಮಗ ಪರಸಪ್ಪ, 4 ನೇ ಮಗ ತಿಮ್ಮಯ್ಯ, 5 ನೇ ಮಗ ಕಟ್ಟೆ ಯಲ್ಲಪ್ಪ, ಕೊಲ್ಲಾರಪ್ಪ, ತಿಪ್ಪಯ್ಯನ ಮಕ್ಕಳಾದ ಯಲ್ಲಪ್ಪ ಮತ್ತು ರಾಮಚಂದ್ರಪ್ಪರವರು 1973 ನೇ ಸಾಲಿನಲ್ಲಿ ಜುಬಾಣಿ ಪಾಲುವಿಭಾಗ ಮಾಕೊಂಡಿದ್ದರು ಎಂದರೆ ಸರಿ. ಸದರಿ ಜುಬಾಣಿ ಪಾಲುವಿಭಾಗದಂತೆ ಪಾಲುದಾರರ ಹೆಸರು ಕಂದಾಯ ದಾಖಲೆಗಳಲ್ಲಿ ಬಂದಿರುತ್ತವೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಎಲ್ಲರು ಪ್ರತ್ಯೇಕವಾಗಿ ತಮ್ಮ ತಮ್ಮ ಮನೆಗಳಲ್ಲಿ ವಾಸ ಇದ್ದರು ಎಂದರೆ ಸರಿ. 1973 ನೇ ಸಾಲಿನಲ್ಲಿ ಜುಬಾಣಿ ಪಾಲುವಿಭಾಗದಂತೆ ಒಟ್ಟು ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಜುಬಾಣಿ ಪಾಲುವಿಭಾಗದಂತೆ ಪಾಲುದಾರರ ಸ್ವಾಧೀನಕ್ಕೆ ಅನುಗುಣವಾಗಿ ಪಹಣಿಗಳು ಬಂದಿರುತ್ತವೆ ಎಂದರೆ ಸರಿಯಲ್ಲ.

35. ಸಾಕ್ಷಿಗೆ ನಿಪಿಃ15 ರ ದಾಖಲೆಯನ್ನು ತೋರಿಸಿ ಕಾಲಂ-9 ರಲ್ಲಿ ನಮೂದಾಗಿರುವ ವ್ಯಕ್ತಿಗಳ ಹೆಸರಿಗೆ ಪಹಣಿ ಇದೆ ಎಂದರೆ ಸಾಕ್ಷಿಯು ಇದು ಸುಳ್ಳು ದಾಖಲೆ ಎಂದು ನುಡಿಯುತ್ತಾರೆ. ನಿಪಿಃ18 ರ ಪ್ರಕಾರ ಸರ್ವೇ ನಂ.63/ಪಿ ರ 3 ಎಕರೆ ಜಮೀನು IHC02/1981-82 ರ ಪ್ರಕಾರ ಗಂಗಯ್ಯ ಬಿನ್ ಎಲ್ಲಪ್ಪರವರಿಂದ ಪರಸಯ್ಯರವರಿಗೆ ಖಾತೆ ಬದಲಾವಣೆಯಾಗಿರುತ್ತದೆ ಎಂದು ಸಾಕ್ಷಿಗೆ ನಿಪಿಃ18 ನ್ನು ತೋರಿಸಲಾಗಿ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನಿಪಿಃ18 ರ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಪಿಃ17 ರ ಪ್ರಕಾರ ಸರ್ವೇ ನಂ.63/ಪಿ ರ 8 ಎಕರೆ 20 ಗುಂಟೆ ಜಮೀನು IHC04/1982-83 ರ ಪ್ರಕಾರ ಪೌತಿಯ ಮೇಲೆ

ತಿಮ್ಮಯ್ಯ ಬಿನ್ ಪರಸಪ್ಪರವರ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ ಎಂದು ಸಾಕ್ಷಿಗೆ ನಿಪಿಃ17 ನ್ನು ತೋರಿಸಲಾಗಿ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನಿಪಿಃ17 ರ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

36 ಸರ್ವೇ ನಂ.63/ಪಿ ರ 8 ಎಕರೆ 20 ಗುಂಟೆ ಜಮೀನು IHC02/1982-83 ರ ಪ್ರಕಾರ ಪೌತಿಯ ಮೇಲೆ 4 ರಿಂದ 7 ನೇ ಪ್ರತಿವಾದಿಗಳ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ ಎಂದು ಸಾಕ್ಷಿಗೆ ನಿಪಿಃ19 ನ್ನು ತೋರಿಸಲಾಗಿ ಸಾಕ್ಷಿಯು ಪ್ರತಿವಾದಿಗಳು ಮಾಡಿಕೊಂಡಿರಬಹುದು ಅನ್ನುತ್ತಾರೆ. ನಿಪಿಃ19 ರ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಆದರೆ ನಮಗೆ ಗೊತ್ತಿಲ್ಲದಂತೆ ದಾಖಲೆಗಳನ್ನು ಮಾಡಿಕೊಂಡಿರುತ್ತಾರೆ. ನಿಪಿಃ1 ರ ಪ್ರಕಾರ ಸರ್ವೇ ನಂ.63/1 ವಿಸ್ತೀರ್ಣ 6 ಎಕರೆ ಜಮೀನು 6 ನೇ ಪ್ರತಿವಾದಿಯ ಹೆಸರಿಗೆ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಮಗೆ ಗೊತ್ತಿಲ್ಲದ ಹಾಗೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿಃ2 ರ ಪ್ರಕಾರ ಸರ್ವೇ ನಂ.63/2 ವಿಸ್ತೀರ್ಣ 1 ಎಕರೆ ಜಮೀನು 6 ನೇ ಪ್ರತಿವಾದಿಯ ಹೆಸರಿಗೆ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಮಗೆ ಗೊತ್ತಿಲ್ಲದ ಹಾಗೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

37. ನಿಪಿಃ1 ಮತ್ತು 2 ರಂತೆ 6 ನೇ ಪ್ರತಿವಾದಿ ಸರ್ವೇ ನಂ.63/1 ಮತ್ತು 63/2 ರ ಜಮೀನುಗಳಲ್ಲಿ ಸ್ವಾಧೀನ ಇದ್ದಾರೆ ಎಂದರೆ ಸರಿ. 1973 ನೇ ಸಾಲಿನಲ್ಲಿ ಆದ ಜುಬಾಣಿ ಪಾಲುವಿಭಾಗದಂತೆ 6 ನೇ ಪ್ರತಿವಾದಿ ಸ್ವತ್ತುಗಳ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. 1973 ನೇ ಸಾಲಿನಲ್ಲಿ ಆದ ಜುಬಾಣಿ ಪಾಲುವಿಭಾಗದಂತೆ ನಿಪಿಃ3 ರ ಪಹಣಿಯಲ್ಲಿ ನಮೂದಿಸಿದಂತೆ ಸದರಿ ಸ್ವತ್ತಿನಲ್ಲಿ 3 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. 1973 ನೇ ಸಾಲಿನಲ್ಲಿ ಆದ ಜುಬಾಣಿ ಪಾಲುವಿಭಾಗದಂತೆ ನಿಪಿಃ4 ರ ಪಹಣಿಯಲ್ಲಿ ನಮೂದಿಸಿದಂತೆ ಸದರಿ ಸ್ವತ್ತಿನಲ್ಲಿ 2 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. 1973 ನೇ ಸಾಲಿನಲ್ಲಿ ಆದ ಜುಬಾಣಿ ಪಾಲುವಿಭಾಗದಂತೆ ನಿಪಿಃ5 ರ ಪಹಣಿಯಲ್ಲಿ ನಮೂದಿಸಿದಂತೆ ಸದರಿ ಸ್ವತ್ತಿನಲ್ಲಿ 1 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಮಗೆ ಗೊತ್ತಿಲ್ಲದ ಹಾಗೆ ಈ ಮೇಲೆ ತಿಳಿಸಿದ ಎಲ್ಲರು ತಮ್ಮ ಹೆಸರಿಗೆ ದಾಖಲೆಗಳನ್ನು ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 1973 ನೇ ಸಾಲಿನಲ್ಲಿ ಆದ ಜುಬಾಣಿ ಪಾಲುವಿಭಾಗದಂತೆ ನಿಪಿಃ6 ರ ಪಹಣಿಯಲ್ಲಿ ನಮೂದಿಸಿದಂತೆ ಸದರಿ ಸ್ವತ್ತಿನಲ್ಲಿ 8 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. 1973 ನೇ ಸಾಲಿನಲ್ಲಿ ಆದ ಜುಬಾಣಿ ಪಾಲುವಿಭಾಗದಂತೆ ನಿಪಿಃ7 ರ ಪಹಣಿಯಲ್ಲಿ ನಮೂದಿಸಿದಂತೆ ಸದರಿ ಸ್ವತ್ತಿನಲ್ಲಿ 7 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ.

1973 ನೇ ಸಾಲಿನಲ್ಲಿ ಆದ ಜುಬಾಣಿ ಪಾಲುವಿಭಾಗದಂತೆ ನಿಪಿಃ8 ರ ಪಹಣಿಯಲ್ಲಿ ನಮೂದಿಸಿದಂತೆ



ಸದರಿ ಸ್ವತ್ತಿನಲ್ಲಿ 9 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಮಗೆ ಗೊತ್ತಿಲ್ಲದ ಹಾಗೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

38. 1973 ನೇ ಸಾಲಿನಲ್ಲಿ ಆದ ಜುಬಾಣಿ ಪಾಲುವಿಭಾಗದಂತೆ ನಿಪಿಃ9 ರ ಪಹಣಿಯಲ್ಲಿ ನಮೂದಿಸಿದಂತೆ ಸದರಿ ಸ್ವತ್ತಿನಲ್ಲಿ 10 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಮಗೆ ಗೊತ್ತಿಲ್ಲದ ಹಾಗೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 1973 ನೇ ಸಾಲಿನಲ್ಲಿ ಆದ ಜುಬಾಣಿ ಪಾಲುವಿಭಾಗದಂತೆ ನಿಪಿಃ10 ರ ಪಹಣಿಯಲ್ಲಿ ನಮೂದಿಸಿದಂತೆ ಸದರಿ ಸ್ವತ್ತಿನಲ್ಲಿ 7 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಮಗೆ ಗೊತ್ತಿಲ್ಲದ ಹಾಗೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 1973 ನೇ ಸಾಲಿನಲ್ಲಿ ಆದ ಜುಬಾಣಿ ಪಾಲುವಿಭಾಗದಂತೆ ನಿಪಿಃ11 ರ ಪಹಣಿಯಲ್ಲಿ ನಮೂದಿಸಿದಂತೆ ಸದರಿ ಸ್ವತ್ತಿನಲ್ಲಿ 5 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಮಗೆ ಗೊತ್ತಿಲ್ಲದ ಹಾಗೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 1973 ನೇ ಸಾಲಿನಲ್ಲಿ ಆದ ಜುಬಾಣಿ ಪಾಲುವಿಭಾಗದಂತೆ ನಿಪಿಃ12 ರ ಪಹಣಿಯಲ್ಲಿ ನಮೂದಿಸಿದಂತೆ ಸದರಿ ಸ್ವತ್ತಿನಲ್ಲಿ 4 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಮಗೆ ಗೊತ್ತಿಲ್ಲದ ಹಾಗೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

39 ನಿಪಿಃ13 ಮತ್ತು ನಿಪಿಃ14 ರ ಪ್ರಕಾರ ಸರ್ವೇ ನಂ.63 ರ ಜಮೀನು ವಿಭಾಗ ಹೊಂದಿ ಒಟ್ಟು ಕುಟುಂಬದ ವ್ಯವಸ್ಥೆಯಿಂದ ಹೊರ ಬಂದಿರುತ್ತದೆ ಎಂದರೆ ಸರಿಯಲ್ಲ. ನಿಪಿಃ16 ರಲ್ಲಿ ಕಾಲಂ ನಂ.9 ರಲ್ಲಿ ನಮೂದು ಇರುವ ಚಂದ್ರಪ್ಪ ಬಿನ್ ಲಕ್ಷ್ಮಪ್ಪ ಯಾರು ಎಂದು ನನಗೆ ಗೊತ್ತಿಲ್ಲ. ನಿಪಿಃ16 ರಲ್ಲಿ ಕಾಲಂ ನಂ.9 ರಲ್ಲಿ ನಮೂದು ಇರುವ ಯಲ್ಲಪ್ಪ ಬಿನ್ ತಿಪ್ಪಯ್ಯ ನನ್ನ ದೊಡ್ಡಪ್ಪ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿಃ16 ರಲ್ಲಿ ಚಂದ್ರಪ್ಪ ಬಿನ್ ಲಕ್ಷ್ಮಪ್ಪ ಮತ್ತು ಯಲ್ಲಪ್ಪ ಬಿನ್ ತಿಪ್ಪಯ್ಯರವರ ಹೆಸರು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಸದರಿಯವರಿಬ್ಬರು ಈ ದಾವೆಗೆ ಸಂಬಂಧಿಸಿದ ವ್ಯಕ್ತಿಗಳು ಎಂದರೆ ನನಗೆ ಗೊತ್ತಿಲ್ಲ.

40. ನಮ್ಮ ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದಲ್ಲಿ ಜನಸಂಖ್ಯೆ ಹೆಚ್ಚಾಗಿದ್ದರಿಂದ ನಾವು ಮತ್ತು ಪ್ರತಿವಾದಿಗಳು ಅವರವರ ಹೆಂಡತಿ ಮಕ್ಕಳೊಂದಿಗೆ ಪ್ರತ್ಯೇಕವಾಗಿ ವಾಸ ಮಾಡುತ್ತಾ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಜಂಟಿಯಾಗಿ ಅನುಭವ ಇದ್ದೇವೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳಾಗಿ ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಪ್ರತ್ಯೇಕವಾಗಿ ವಾಸ ಇದ್ದ ಮನೆಗಳ ಸಂಖ್ಯೆ

ಹಾಗೂ ಚೆಕ್ ಬಂದಿ ಹೇಳಲು ಆಗುವುದಿಲ್ಲ. ವಾದಿಯರಿಗೆ ರಾಮಜೋಗಿಹಳ್ಳಿ ಗ್ರಾಮದಲ್ಲಿ ಯಾವುದೇ ಮನೆಗಳು ಇಲ್ಲ ಎಂದರೆ ಸರಿ. ನಾನಾಗಲೀ, ನನ್ನ ತಂದೆಯಾಗಲೀ ಅಥವಾ ನನ್ನ



ತಾತನಾಗಲೀ ರಾಮಜೋಗಿಹಳ್ಳಿಯಲ್ಲಿ ವಾಸವಿರದ ಕಾರಣ ನಮ್ಮಗಳ ಹೆಸರಿನಲ್ಲಿ ವಾಸ ಮನೆಗಳಾಲೀ ಅಥವಾ ಜಮೀನುಗಳಾಗಲೀ ಇರುವುದಿಲ್ಲ ಎಂದರೆ ಸಾಕ್ಷಿಯು ಮನೆ ಇರುವುದಿಲ್ಲ ಆದರೆ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರಿದು ನಮ್ಮ ತಾತ ಮದುವೆಯಾಗಿ ಬುರುಜನರೊಪ್ಪಕ್ಕೆ ವಲಸೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಆದರೆ ವಲಸೆ ಹೋದ ನಿಖರವಾದ ದಿನಾಂಕ, ತಿಂಗಳು ಮತ್ತು ವರ್ಷ ನನಗೆ ಗೊತ್ತಿಲ್ಲ. ನಮ್ಮ ತಾತನವರ ಕಾಲದಿಂದಲೂ ನಾವುಗಳು ರಾಮಜೋಗಿಹಳ್ಳಿ ಗ್ರಾಮದಲ್ಲಿ ವಾಸ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಮ್ಮ ತಂದೆ ಆಗಾಗ್ಗೆ ಬರುತ್ತಿದ್ದರು ಎಂದು ನುಡಿಯುತ್ತಾರೆ. ನಮ್ಮ ತಂದೆಯವರು ಆಗಾಗ್ಗೆ ರಾಮಜೋಗಿಹಳ್ಳಿಗೆ ಬರುತ್ತಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

41. ನನ್ನ ಮತ್ತು ಪ್ರತಿವಾದಿಗಳ ವಂಶ ಬೇರೆ ಬೇರೆಯಾಗಿರುವ ಕಾರಣ ಪಾಲುವಿಭಾಗವಾಗುವ ಪ್ರಮೇಯವೇ ಉದ್ಭವವಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ಅಸಲು ವಿಭಾಗದ ಸಂಬಂಧ ವೈಮನಸ್ಸು ಉಂಟಾಗಿರುತ್ತದೆ ಎಂದು ನುಡಿದಿರುತ್ತೇನೆ ಆದರೆ ನನ್ನ ತಾತನ ಕಾಲದಲ್ಲಿ ಆಗಿರುತ್ತದೋ ಅಥವಾ ನನ್ನ ತಂದೆಯ ಕಾಲದಲ್ಲಿ ಆಗಿರುತ್ತದೋ ಎಂದು ನನಗೆ ಗೊತ್ತಿಲ್ಲ.

42. ಪಾಲುವಿಭಾಗವನ್ನು ನನ್ನ ತಂದೆಯ ಕಾಲಕ್ಕೆ ಕೇಳಿರುತ್ತೇವೆ. ನನ್ನ ತಂದೆ ಪೌತಿಯಾಗಿ 40 ವರ್ಷಆಗಿರುತ್ತದೆ. ಆದರೆ ನಿಖರವಾದ ದಿನಾಂಕ, ತಿಂಗಳು ಮತ್ತು ವರ್ಷ ನನಗೆ ಗೊತ್ತಿಲ್ಲ. ಪಾಲುವಿಭಾಗ ಕೋರಿ ಯಲ್ಲಪ್ಪ ಮತ್ತು ರಾಮಚಂದ್ರಪ್ಪರವರು ಹೋಗಿರುತ್ತಾರೆ. ಈ ಎಲ್ಲಾ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರಾಮಚಂದ್ರಪ್ಪ ಪೌತಿಯಾಗಿ 40 ವರ್ಷ ಮತ್ತು ಯಲ್ಲಪ್ಪ ಪೌತಿಯಾಗಿ ಸುಮಾರು 35 ವರ್ಷಗಳಾಗಿರುತ್ತವೆ. ಯಾರ ಸಮಕ್ಷಮ ಪಾಲುವಿಭಾಗವನ್ನು ಕೇಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ತಿಪ್ಪಯ್ಯರವರ ಮಕ್ಕಳಾದ ಯಲ್ಲಪ್ಪ ಮತ್ತು ರಾಮಚಂದ್ರಪ್ಪರವರಿಗೆ ನಷ್ಟ ಸಂತತಿ ಎಂದರೆ ಸರಿಯಲ್ಲ. ಸದರಿ ಯಲ್ಲಪ್ಪ ಮತ್ತು ರಾಮಚಂದ್ರಪ್ಪರವರು ಪಾಲುವಿಭಾಗವಾಗಿ ಪ್ರತಿವಾದಿಯರಿಗೆ ತಮ್ಮ ಭಾಗವನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

43. ದಿಃ31-12-1973 ರ ಜುಬಾಣಿ ಪಾಲುವಿಭಾಗ ಪತ್ರದ ದಿನದಂದು ತಿಪ್ಪಯ್ಯರವರ ವಾರಸುದಾರರು, 4 ನೇ ಪ್ರತಿವಾದಿ ಗಂಗಪ್ಪನಿಂದ ರೂ.8000/- ಗಳನ್ನು ಪಡೆದುಕೊಂಡು 7

ಎಕರೆ 38 ಗುಂಟೆ ಜಮೀನನು ಸದರಿಯವರ ಸ್ವಾಧೀನಾನುಭವಕ್ಕೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಂದಿನಿಂದಲೂ ಸದರಿ 7 ಎಕರೆ 38 ಗುಂಟೆ ಜಮೀನಿಗೆ ಸಂಬಂಧಿಸಿದಂತೆ 4 ನೇ ಪ್ರತಿವಾದಿಯ ಹೆಸರಿಗೆ ಕಂದಾಯ ದಾಖಲೆಗಳು ಇವೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲದ ಹಾಗೆ



ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿಯ ಹೆಸರಿಗೆ ಇರುವ ಕಂದಾಯ ದಾಖಲೆಗಳನ್ನು ಯಾವುದೇ ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನಿಸಿರುವುದಿಲ್ಲ. 4 ನೇ ಪ್ರತಿವಾದಿಯನ್ನುಹೊರತುಪಡಿಸಿ ಸರ್ವೆ ನಂ.63 ರಲ್ಲಿ 7 ಎಕರೆ 38 ಗುಂಟೆ ವಿಸ್ತೀರ್ಣಕ್ಕೆ ಬೇರೆ ಯಾರಿಗೆ ಹಕ್ಕು, ಮಾಲೀಕತ್ವ, ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ಪರಸಪ್ಪನ ಪೌತಿಯ ನಂತರ ಆತನ ಭಾಗಾಂಶಕ್ಕೆ ಬಂದಿದ್ದ 8 ಎಕರೆ 20 ಗುಂಟೆ ಜಮೀನು ಆತನ ಮೊಮ್ಮಗನಾದ 8 ನೇ ಪ್ರತಿವಾದಿಯ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲೆಗಳ ಪ್ರಕಾರ ಜುಬಾಣಿ ಪಾಲುವಿಭಾಗದಂತೆ ಪ್ರತಿವಾದಿಗಳ ಹೆಸರಿಗೆ ಕಂದಾಯ ದಾಖಲೆಗಳು ಇವೆ ಎಂದರೆ ಸರಿ. ಸಾಕ್ಷಿಯು ನಮಗೆ ಗೊತ್ತಿಲ್ಲದ ಹಾಗೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

44. ಸುಮಾರು 50 ವರ್ಷಗಳಿಂದಲೂ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಅನುಭವದಲ್ಲಿದ್ದಾರೆ ಎಂದರೆ ಇರಬಹುದು ಸಾಕ್ಷಿಯು ಮುಂದುವರಿದು ನಮಗೆ ಗೊತ್ತಿಲ್ಲದ ಇರುತ್ತಾರೆ ಎಂದು ನುಡಿಯುತ್ತಾರೆ. ಸುಮಾರು 50 ವರ್ಷಗಳಿಂದಲೂ ಪ್ರತಿವಾದಿಗಳ ದಾವಾ ಸ್ವತ್ತಿನ ಅನುಭವವನ್ನು ನಮ್ಮ ತಂದೆಯಾಗಲೀ, ನಮ್ಮ ತಾತನಾಗಲೀ ಮತ್ತು ನಾನಾಗಲೀ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ವಾದಿಯರು ಪ್ರತಿವಾದಿಗಳ ವಂಶಸ್ಥರಲ್ಲದ ಕಾರಣ ಪ್ರತಿವಾದಿಗಳ ದಾವಾ ಸ್ವತ್ತಿನ ಅನುಭವವನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. 1 ರಿಂದ 7 ನೇ ಪ್ರತಿವಾದಿಗಳು ದಿಃ04-06-2011 ರಂದು ನೋಂದಣಿ ಪಾಲುವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಹಾಗೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪಾಲುವಿಭಾಗ ಪತ್ರದಲ್ಲಿ 1 ರಿಂದ 3 ನೇ ಪ್ರತಿವಾದಿಯರಿಗೆ 12 ಎಕರೆ 8 ಗುಂಟೆ ಪೈಕಿ ತಲಾ 4 ಎಕರೆ 2 ಗುಂಟೆ ಬಂದಿರುತ್ತದೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದ ಹಾಗೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

45. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ 1 ರಿಂದ 3 ನೇ ಪ್ರತಿವಾದಿಗಳು ವೈಯಕ್ತಿಕ ಪತ್ರದ ಆಧಾರದ ಮೇಲೆ ಹಕ್ಕು ಬದಲಾವಣೆ ಮಾಡಿಕೊಂಡಿದ್ದಾರೆ ಎಂದು ಹೇಳಲಾಗಿದೆ ಎಂದರೆ ಸಾಕ್ಷಿಯು ನಾನು ಬರೆಸಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಒಬ್ಬರಿಗೊಬ್ಬರು ಷರೀಕಾಗಿ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ ಮತ್ತು 2013 ನೇ ಸಾಲಿನಲ್ಲಿ ನಾವು ಪಾಲುವಿಭಾಗಕ್ಕೆ ಕೋರಿದಾಗ ತಿರಸ್ಕರಿಸಿರುತ್ತಾರೆ ಎಂದು ಸುಳ್ಳಾಗಿ ನನ್ನ ಮುಖ್ಯ ವಿಚಾರಣೆ

ಪ್ರಮಾಣ ಪತ್ರದಲ್ಲಿ ನಮೂದಿಸಲಾಗಿದೆ ಎಂದರೆ ಸರಿಯಲ್ಲ. 1973 ನೇ ಸಾಲಿನಲ್ಲಿ ತಿಪ್ಪಯ್ಯರವರ ವಂಶಸ್ಥರು ಪ್ರತಿವಾದಿಯರಿಗೆ ದಾವಾ ಸ್ವತ್ತನ್ನು ಬಿಟ್ಟುಕೊಟ್ಟಿರುವ ಕಾರಣ 2014 ನೇ ಸಾಲಿನಲ್ಲಿ ಹೂಡಿರುವ ಪ್ರಸ್ತುತ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರೇ ದಾವಾ ಸ್ವತ್ತಿನ ಮಾಲೀಕರು, ಹಕ್ಕು ಉಳ್ಳವರು ಎಂದು ತಿಳಿದಿದ್ದರೂ ಸಹ ಸದರಿಯವ ವಿರುದ್ಧ ಸುಳ್ಳು



ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

46. 5 ನೇ ಪ್ರತಿವಾದಿ ತನ್ನ ಒಂದನೇ ಹೆಂಡತಿಯ ಮಗಳಾದ 9 ನೇ ಪ್ರತಿವಾದಿಗೆ ಸಾಕ್ಷಿಗಳ ಸಮಕ್ಷಮ ದಿಃ10-01-2013 ರಂದು ನೋಂದಣಿ ದಾನಪತ್ರದ ಮುಖಾಂತರ 1 ಎಕರೆ ಜಮೀನನ್ನು ದಾನವಾಗಿ ನೀಡಿರುತ್ತಾರೆ ಮತ್ತು ಅದರ ಪ್ರಕಾರ ಕಂದಾಯ ದಾಖಲೆಗಳು 9 ನೇ ಪ್ರತಿವಾದಿಯ ಹೆಸರಿಗೆ ಇದ್ದು, ಸದರಿಯವರೇ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲದ ಹಾಗೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 8 ನೇ ಪ್ರತಿವಾದಿ ತನ್ನ ಭಾಗಾಂಶಕ್ಕೆ ಬಂದ 1 ಎಕರೆ 2 ಗುಂಟೆ ಜಮೀನನ್ನು 10 ನೇ ಪ್ರತಿವಾದಿಯ ಹೆಸರಿಗೆ ಸಾಕ್ಷಿಗಳ ಸಮಕ್ಷಮ ದಿಃ10-01-2013 ರಂದು ನೋಂದಣಿ ದಾನಪತ್ರದ ಮುಖಾಂತರ ದಾನವಾಗಿ ನೀಡಿರುತ್ತಾರೆ ಮತ್ತು ಅದರ ಪ್ರಕಾರ ಕಂದಾಯ ದಾಖಲೆಗಳು 10 ನೇ ಪ್ರತಿವಾದಿಯ ಹೆಸರಿಗೆ ಇದ್ದು, ಸದರಿಯವರೇ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲದ ಹಾಗೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಮಾಡಿಕೊಂಡಿರುವಂತಹ 1973 ರ ಜುಬಾಣಿ ಪಾಲುವಿಭಾಗ ಪತ್ರ ಮತ್ತು ಈ ಮೇಲೆ ತಿಳಿಸಿದ ದಾನಪತ್ರಗಳು ನಮಗೆ ಬಂಧನಕಾರಿಯಾಗಿರುತ್ತವೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದ ಹಾಗೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಎಲ್ಲಾ ವಿಚಾರ ತಿಳಿದಿದ್ದರೂ ಸಹ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸಾಕ್ಷಿಯು ಈ ಎಲ್ಲಾ ವಿಚಾರ ತಿಳಿದಿದ್ದೆ ದಾವೆಯನ್ನು ಹೂಡಿರುತ್ತೇವೆ ಎಂದು ನುಡಿಯುತ್ತಾರೆ. ಈ ದಾವೆ ಕಾಲ ಪರಿಮಿತಿಯಿಂದ ಬಾಧಿತವಾಗಿದೆ ಎಂದರೆ ಸರಿಯಲ್ಲ. ನಾವುಗಳು ಯಲ್ಲಪ್ಪ ಮತ್ತು ರಾಮಚಂದ್ರಪ್ಪರವರ ವಂಶಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.